ವಾ ಥಿ ನ್ಗು ಮೈ ವಿಯೆಟ್ನಾಮಿನ ಹೊಸ ತಲೆಮಾರಿನ ಕವಯಿತ್ರಿ ಹಾಗೂ ಅನುವಾದಕಿ. 1976ರ ಮಾರ್ಚ್ 18ರಂದು ಲಮ್ ಡ್ಡೋಮ್‌ನಲ್ಲಿ ಜನಿಸಿದರು. ಕಳೆದೆರಡು ದಶಕಗಳಿಂದ ಶಾಲಾ ಶಿಕ್ಷಕಿಯಾಗಿ ಪಶ್ಚಿಮ ಆಸ್ಟ್ರೇಲಿಯಾದ ಪರ್ತ್ ನಗರದಲ್ಲಿ ವಾಸವಾಗಿದ್ದಾರೆ. ಅಲ್ಲಿನ ಮಕ್ಕಳಿಗೆ ವಿಯೆಟ್ನಾಮಿ ಭಾಷೆ, ಸಾಹಿತ್ಯ ಹಾಗೂ ಕಲಾ ಇತಿಹಾಸವನ್ನು ಬೋಧಿಸುತ್ತಾರೆ. ಕವಿತೆ ಹಾಗೂ ಅನುವಾದ ಇವರ ಆಸಕ್ತಿಯ ಕ್ಷೇತ್ರಗಳು. ದ್ವಿಭಾಷಾ ಕಾವ್ಯ ಜಾಲತಾಣವಾದ The Rhythm of Vietnamನ ಸ್ಥಾಪಕ ಸಂಪಾದಕರಾಗಿ ಕಳೆದ 15 ವರುಷಗಳಿಂದ ಕ್ರಿಯಾಶೀಲರಾಗಿದ್ದಾರೆ. 2024ರಲ್ಲಿ ವಿಶ್ವ ಕಾವ್ಯ ಚಳವಳಿಯ ಭಾಗವಾಗಿ 48ಗಂಟೆಗಳ ಮ್ಯಾರಥಾನ್ ಕಾವ್ಯ ಓದು 'A Song of Love for Gaza' ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

## ವಾ ಥಿ ನ್ಗು ಮೈ ಅವರ ಸಂದರ್ಶನ

**◆ ನಿಮ್ಮ ಬಾಲ್ಯದ ಪರಿಸರ, ಕುಟುಂಬ ಮತ್ತು ಶೈಕ್ಷಣಿಕ ದಿನಗಳ ನೆನಪುಗಳನ್ನು ಹಂಚಿಕೊಳ್ಳಿ.**

ಭಾಷೆ ಮತ್ತು ಸಾಹಿತ್ಯವನ್ನು ಸದಾ ಪ್ರೀತಿಸುತ್ತಿದ್ದ ವಿಯೆಟ್ನಾಂ ಕುಟುಂಬದಲ್ಲಿ ನಾನು ಹುಟ್ಟಿ ಬೆಳೆದೆ. ನಮ್ಮನ್ನು ಮಲಗಿಸಲು ಅಮ್ಮ ಹೇಳುತ್ತಿದ್ದ ಕಥೆಗಳ ಜೊತೆಗೆ ನಾನು ಇಷ್ಟಪಡುವ ಪದ್ಯಗಳನ್ನೂ ಒಂದು ಚಿಕ್ಕ ನೋಟ್ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲು ಆಕೆ ಹುರಿದುಂಬಿಸುತ್ತಿದ್ದದ್ದು ನನ್ನ ಆರಂಭಿಕ ನೆನಪುಗಳು. ಅಪ್ಪ ಕೆಲಸದ ನಿಮಿತ್ತ ಆಗಾಗ ಪ್ರಯಾಣ ಮಾಡುತ್ತಿದ್ದರು. ಮತ್ತವರು ಹಿಂತಿರುಗಿ ಬರುವಾಗ ಯಾವಾಗಲೂ ನನಗಾಗಿ ಪುಸ್ತಕಗಳನ್ನು ತರುತ್ತಿದ್ದರು. ಶಾಲೆಯಲ್ಲಿ ಒಳ್ಳೆಯ ಅಂಕ ಪಡೆದಾಗ Xuân Qunh ಅವರ ಕವನ ಸಂಕಲನವನ್ನು ಅಪ್ಪ ನನಗೆ ಉಡುಗೊರೆಯಾಗಿ ಕೊಟ್ಟ ನೆನಪು ಹಸಿರಾಗಿದೆ. ಅದು ನನಗೆ ಸಿಕ್ಕ ಮೊದಲ ಕವಿತೆಗಳ ಪುಸ್ತಕ. ಆ ಪುಸ್ತಕವು ನನ್ನ ಬಾಲ್ಯದ ಶ್ರೇಷ್ಠ ಸಂಪತ್ತುಗಳಲ್ಲಿ ಒಂದಾಯಿತು. ಶಾಲೆಯಲ್ಲಿ ನಾನು ಸಾಹಿತ್ಯ ಮತ್ತು ಗಣಿತದ ಬಗ್ಗೆ, ಅದರಲ್ಲೂ ವಿಶೇಷವಾಗಿ ರೇಖಾಗಣಿತದ ಬಗ್ಗೆ ಸಮಾನವಾದ ಆಸಕ್ತಿ ಹೊಂದಿದ್ದೆ. ನನಗೆ ಕವಿತೆಯು ಜ್ಯಾಮಿತಿಯ ಹಾಗೆ ಒಂದಕ್ಕೊಂದು ಪೂರಕವಾದ ಆಕಾರ, ವಿನ್ಯಾಸವನ್ನೂ ಸೃಷ್ಟಿಸಿಕೊಂಡು, ಪದರು ಪದರಾಗಿ ಕಲ್ಪನೆಯ ಅನಂತ ಆಯಾಮಗಳನ್ನು ತೆರೆಯುವಂತಿತ್ತು. ಆ ಆರಂಭಿಕ ದಿನಗಳು ನನ್ನಲ್ಲಿ ಜ್ಞಾನ ಮತ್ತು ಶಿಸ್ತು, ಎಲ್ಲಕ್ಕಿಂತ ಹೆಚ್ಚಾಗಿ, ನನ್ನ ಜೀವನದುದ್ದಕ್ಕೂ ಉಳಿದು ಬಂದಿರುವ ವಿಯೆಟ್ನಾಂ ಭಾಷೆಯ ಬಗ್ಗೆ ಅರಿವನ್ನು ಮೂಡಿಸಿದವು.

**◆ ಬಾಲ್ಯದ ತುಂಟಾಟದ ಘಟನೆ ಯಾವುದಾದರೂ ನೆನಪಿದೆಯಾ?**

ಅನೇಕ ಯುವ ವಿದ್ಯಾರ್ಥಿಗಳಂತೆ, ನನಗೂ ಹುಡುಗಾಟದ ಸ್ವಭಾವವಿತ್ತು. ಹೈಸ್ಕೂಲಿನಲ್ಲಿರುವಾಗ ಒಮ್ಮೆ ನಾವೆಲ್ಲಾ ಗೆಳೆಯರು ತರಗತಿಗಳನ್ನು ಬಂಕ್ ಮಾಡಿ ಮನೆಗೆ ಹೋಗಿ ಒಟ್ಟಿಗೆ ಅಡುಗೆ ಮಾಡಿ ತಿಂದಿದ್ದೆವು. ಇದರ ಪರಿಣಾಮವನ್ನು ನಾವು ಆಮೇಲೆ ಅನುಭವಿಸ ಬೇಕಾಯಿತು. ಮತ್ತೊಂದು ಬಾರಿ, ನಾವೆಲ್ಲರೂ ತರಗತಿಯ ಬಾಗಿಲಿಗೆ ಚಿಲಕ ಹಾಕಿ ಬೆಂಚುಗಳ ಅಡಿಯಲ್ಲಿ ಅಡಗಿಕೊಂಡು, ಶಿಕ್ಷಕರು ತರಗತಿಗೆ ಪ್ರವೇಶಿಸಲು ಸಾಧ್ಯವಾಗದಂತೆ ಮಾಡಿದ್ದೆವು. ಇನ್ನೊಂದು ಸಂದರ್ಭದಲ್ಲಿ ನಾವು ಒಟ್ಟಾಗಿ ಟೀಚರ್ ಹೇಳಿದ ಏನೊಂದು ಅರ್ಥವಾಗದಂತೆ ನಟಿಸುತ್ತಾ ಆಕೆ ಕಣ್ಣೀರು ಸುರಿಸುವವರೆಗೂ ಮೊಂಡುತನದಿಂದ ನಿರಾಕರಿಸುತ್ತಾ ಆಟವಾಡಿಸಿದ್ದೆವು. ಈಗ ಹಿಂದೆ ತಿರುಗಿ ನೋಡಿದಾಗ, ನಾವು ಬಾಲ್ಯದಲ್ಲಿ ಎಷ್ಟು ತುಂಟರಾಗಿದ್ವಿ ಅಂತ ಅನ್ಸುತ್ತೆ ಆದರೆ ತಾರುಣ್ಯದ ಬಂಡಾಯದ ಕ್ಷಣಗಳಂತೂ ಮರೆಯಲಾಗದಂತಹವು.

**◆ ನಿಮ್ಮ ತಂದೆ-ತಾಯಿಗಳ ವೃತ್ತಿ ಏನಾಗಿತ್ತು? ನೀವೀಗ ಏನು ಕೆಲಸ ಮಾಡುತ್ತಿದ್ದೀರಿ?**